

# ಸೌಂದರ್ಯದ ಜೀವಾಳ ದಾಸವಾಳ

**ದಾಸವಾಳ ಉತ್ತಮ ಸೌಂದರ್ಯವರ್ಧಕ. ತ್ವಚೆಯ ಆರೈಕೆಗೆ, ಕೇಶ ರಕ್ಷಣೆಗೆ ದಾಸವಾಳ ಉಪಯುಕ್ತ. ಆರೋಗ್ಯ ಹಾಗೂ ಅಡುಗೆಗೆ ಪೂರಕವಾದ ಗುಣಗಳನ್ನು ಹೊಂದಿರುವ ದಾಸವಾಳ ನೋಟದಲ್ಲಿಯೂ ಚಂದಕ್ಕಿಂತ ಚಂದ.**

■ ಕವಿತಾ ವಿನು ಭಟ್ಟ

ಅಂದ, ಆಕಾರ, ಬಣ್ಣ, ಸೌಂದರ್ಯದಲ್ಲಿ ದಾಸವಾಳಕ್ಕೆ ಅನುರೂಪವಾದ ಹೂವು ಇನ್ನೊಂದು ಸಿಗಲಾರದು. ಇದರ ಜೊತೆಗೆ ಈ ಹೂವು ಸೌಂದರ್ಯ ಹಾಗೂ ಔಷಧೀಯ ಗುಣಗಳನ್ನೂ ಹೊಂದಿದೆ. ದಾಸವಾಳ ಹೂವಿನ ಅಡುಗೆಯೂ ಬಲು ರುಚಿ. ಒಳಾಂಗಣ ಅಲಂಕಾರಕ್ಕೆ ಸೂಕ್ತವಾದ ಹೂವು ಇದು. ನಿತ್ಯ ಪೂಜೆಗೆ ಬಳಕೆಯಾಗುತ್ತದೆ. ಹೀಗಾಗಿ ದಾಸವಾಳ ಬಹುರೂಪಿ, ಬಹುಗುಣ ಹೊಂದಿರುವ ವಿಶಿಷ್ಟ ಹೂವು.

ದಾಸವಾಳ ಹೂವಿನ ಬಣ್ಣದಲ್ಲೇ ಮಾದಕ ಗುಣವಿದೆ. ಕಡುಗೆಂಪು, ಗುಲಾಬಿ, ಹಳದಿ, ಬಿಳಿ, ತಿಳಿಗುಲಾಬಿ, ತಿಳಿಹಳದಿ, ನಸುಗೆಂಪು.. ಹೀಗೆಹಲವು ಬಣ್ಣ ವೈವಿಧ್ಯಗಳಲ್ಲೂ ಬೆಳೆಯುವ ದಾಸವಾಳ ಸುವಾಸನೆಯಿಲ್ಲದಿದ್ದರೂ ಅದರ ಚೆಲುವಿನಿಂದಲೇ ಮನಸೆಳೆಯುತ್ತದೆ. ಪೋಷಕಾಂಶಗಳ ಆಗರವಾಗಿರುವ ದಾಸವಾಳ ಕೇಶವನ್ನು ಕಪ್ಪಾಗಿಸಿ ಆರೋಗ್ಯಪೂರ್ಣವಾಗಿಸುತ್ತದೆ. ಮೊಡವೆ ನಿವಾರಿಸುತ್ತದೆ, ತ್ವಚೆಯನ್ನು ಮೃದುವಾಗಿಸಿ ಬಂಗು ನಿವಾರಣೆಗೂ ಸಹಕರಿಸುತ್ತದೆ. ಇದರಲ್ಲಿರುವ ಆ್ಯಂಟಿ ಆಕ್ಸಿಡೆಂಟ್ ಚರ್ಮ ಸುಕ್ಕುಗಟ್ಟುವುದನ್ನು ತಡೆಯುತ್ತದೆ.

ಹೂವಿನ ಪೇಸ್ಟ್ ಮುಖಕ್ಕೆ ಹಚ್ಚುವುದರಿಂದ ಮುಖದಲ್ಲಿರುವ ಕಪ್ಪುಕಲೆ ಮಾಯವಾಗುತ್ತದೆ, ಹೆಚ್ಚು ಹೊಳಪು ಬರುವಂತೆ ಮಾಡುತ್ತದೆ.

## ಸೌಂದರ್ಯವರ್ಧಕ

ಮನೆ ಅಂಗಳದಲ್ಲಿ ಅರಳುವ ದಾಸವಾಳ ಹೂಗಳು ಗಾರ್ಡನ್ ಅಂದವನ್ನು ಹೆಚ್ಚಿಸುವುದರ ಜೊತೆಗೆ ನಮ್ಮ ಮುಖದ ಅಂದ ಹೆಚ್ಚಿಸಲು ಉಪಯೋಗಕಾರಿ. ಎಷ್ಟೇ ಚಂದದ ಮುಖವಿದ್ದರೂ ಗಮನಹರಿಸದೇ ಇದ್ದರೆ ಸೌಂದರ್ಯ ಕಳೆಗುಂದುತ್ತದೆ. ಯಾವುದೇ ರೀತಿಯ ತ್ವಚೆ ಇದ್ದರೂ ಫೇಸ್ ಪ್ಯಾಕ್ ಅವಶ್ಯಕ. ಫೇಸ್ ಪ್ಯಾಕ್ ತ್ವಚೆಯ ರಂಧ್ರಗಳನ್ನು ಶುಚಿಗೊಳಿಸುತ್ತದೆ. ಚರ್ಮವನ್ನು ಮೃದುಗೊಳಿಸುತ್ತದೆ.

ದಾಸವಾಳ ಹೂವಿನಲ್ಲಿರುವ ವಿಟಮಿನ್ ಸಿ, ಬೀಟಾ ಕೆರೊಟಿನ್ ಮತ್ತು ಉತ್ಕರ್ಷಣ ನಿರೋಧಕಗಳು ಸೌಂದರ್ಯವೃದ್ಧಿಗೆ ಸಹಾಯಕ. ದಾಸವಾಳ ಹೂವಿನಲ್ಲಿ ಜಾಸ್ತಿ ಪ್ರಮಾಣದ ಲೋಳೆ ಅಂಶ ಇದ್ದು, ಒಣಚರ್ಮವನ್ನು ನೈಸರ್ಗಿಕವಾಗಿ ಹೈಡ್ರೇಟ್ ಮಾಡುತ್ತದೆ. ದಾಸವಾಳ ಅರೆದು ಮುಖಕ್ಕೆ ಹಚ್ಚುವುದರಿಂದ ಒಣಚರ್ಮ ಮೃದುವಾಗುತ್ತದೆ.

ಯಾವುದೇ ಚರ್ಮದ ಟೋನ್, ಹೈಪರ್ ಪಿಗ್ಮೆಂಟೇಷನ್, ಕಪ್ಪು ಕಲೆಗಳಿಗೆ ದಾಸವಾಳ ತ್ವರಿತ ಪರಿಹಾರ ನೀಡುತ್ತದೆ. ಇದು ಚರ್ಮದ ಬಣ್ಣವನ್ನು ನವೀಕರಿಸುವ ಮೂಲಕ ಜೀವಕೋಶಗಳನ್ನು ಪೋಷಿಸುತ್ತದೆ.

ದಾಸವಾಳದ ಸಂಕೋಚಕ ಗುಣವು ರಂಧ್ರಗಳನ್ನು ಬಿಗಿಗೊಳಿಸುತ್ತದೆ. ತ್ವಚೆಯ ಸಮಸ್ಯೆ ಇದ್ದಾಗ ದಾಸವಾಳ ಹೂಗಳನ್ನು ಅರೆದು ಮುಲ್ತಾನಿ ಮಿಟ್ಟಿಯೊಂದಿಗೆ ಸೇರಿಸಿ ಮುಖಕ್ಕೆ ಲೇಪಿಸಿ. ಅರ್ಧ ಗಂಟೆಯ ನಂತರ ಬೆಚ್ಚಗಿನ ನೀರಿನಿಂದ ಸ್ವಚ್ಛಗೊಳಿಸಿ.

ದಾಸವಾಳ ಹೂವಿನ ಜೊತೆಗೆ ಗುಲಾಬಿ ದಳಗಳನ್ನು ಸೇರಿಸಿ ನುಣ್ಣಗೆ ರುಬ್ಬಿಕೊಂಡು ಅಲೊವೆರಾ ಜೆಲ್ ಮತ್ತು ಕೊಬ್ಬರಿ ಎಣ್ಣೆ ಬೆರೆಸಿ ಫ್ರೀಜ್ ಮಾಡಿ ಕ್ರೀಂ ತಯಾರಿಸಿ.